## ನಾಲ್ಕನೆಯ ರೂಪಣಾತ್ಮಕ ಪರೀಕ್ಷೆ-2022-23

### (ಕಲಿಕಾ ಫಲ ಆಧಾರಿತ)

**9ನೇ ತರಗತಿ** | **ಕನ್ನಡ** | **ಅಂಕಗಳು: 20**

---

**ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ** 1*4=4

**1. ಪ್ರಾಮಾಣಿಕತೆ ಕತೆಯಲ್ಲಿ ಹೇಳಿದಂತೆ ಧನಿಕನು ಇಬ್ರಾಹಿಮ್‌ನನ್ನು ನೇಮಿಸಿದ್ದು**

ಎ) ಮಾವಿನ ಹಣ್ಣನ್ನು ತಿನ್ನಲು ಬಿ) ತೋಟ ಕಾಯಲು

ಸಿ) ಅತಿಥಿಗಳನ್ನು ಸತ್ಕರಿಸಲು ಡಿ) ಹಣ್ಣುಗಳ ರುಚಿ ನೋಡಲು

**2. ಕಪ್ಪೆಯ ವ್ಯಥೆ ಕತೆಯಲ್ಲಿ ಪುಟ್ಟು ಕೆರೆ ನೋಡಲು ಹೋದದ್ದು**

ಎ) ಕಪ್ಪೆಯನ್ನು ನೋಡಲು ಬಿ) ಕಪ್ಪೆಯನ್ನು ಕಲ್ಲಿನಿಂದ ಹೊಡೆಯಲು

ಸಿ) ನೀರು ತುಂಬಿದಿಯೇ ಎಂದು ನೋಡಲು ಡಿ) ನೀರು ತರಲು

**3. ಮನೆಗ್ಹೋಗಿ ಮರಿಬ್ಯಾಡ – ಇದರ ಗ್ರಾಂಥಿಕ ರೂಪ**

ಎ) ಮನಿಗಾಗಿ ಮರೆಬೇಡ ಬಿ) ಮನೆಯಲ್ಲಿ ಮರೆಬೇಡ

ಸಿ) ಮನೆಗಾಗಿ ಮರಿಬೇಕು ಡಿ) ಮನೆಗೆ ಹೋಗಿ ಮರೆಯಬೇಡ

**4. ಮಾವಿನ ಹಣ್ಣಿಗಾಗಿ ಕಥೆಯಲ್ಲಿರುವಂತೆ ಮಾವಿನ ಹಣ್ಣಿಗೆ ಆಸೆ ಪಟ್ಟವರು**

ಎ) ಸೂಜು ಬಿ) ಅಪ್ಪು

ಸಿ) ಕಾಗೆ ಡಿ) ಕ್ಯಾಟರ್ ಬಿಲ್ಲು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** 1*3=3

5. ನಿಮಗೆ ಗೊತ್ತಿರುವ ಎರಡು ಜನ ಸಾಧಕರ ಹೆಸರನ್ನು ಬರೆಯಿರಿ.

6. ಯಾವುದಾದರೂ ಒಂದು ಈಮೇಲ್ ವಿಳಾಸವನ್ನು ಬರೆಯಿರಿ ?

7. ವ್ಯಾಪಾರಿ ಆನೆಯನ್ನು ಯಾವ ಯಾವ ಕೆಲಸಕ್ಕೆ ಬಳಸುತ್ತಿದ್ದನು ?

**ಈ ಕೆಳಗಿನ ಪ್ರಶ್ನೆಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ** 2*1=2

8. ರೈತನನ್ನು 'ಅನ್ನದಾತ' ಎಂದು ಕರೆಯಲಾಗುತ್ತದೆ. ಇದಕ್ಕೆ ನಿಮ್ಮ ಅಭಿಪ್ರಾಯಗಳೇನು ?

**9. ಈ ಕೆಳಗಿನ ಚಿತ್ರವನ್ನು ನೋಡಿ ಅಭಿಪ್ರಾಯಗಳನ್ನು ಬರೆಯಿರಿ** 3*1=3



**ಈ ಕೆಳಗಿನ ಪದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.** **4*1=4**

10. ಹಲವು ಬಗೆಯಲೆದ್ದ ಹೊಗೆಯು ಮೋಡದೊಡನೆ ಧೂಳು,
ಉಸಿರ ಗಾಳಿಯನ್ನು ಹಾಳು ಮಾಡುತಿಹವು ಕೇಳು ॥ 1 ॥
ಹರಿವ ನದಿಯ ಕಡೆಗೆ ಸುರಿದ ತ್ಯಾಜ್ಯ ವಸ್ತುವೆಲ್ಲ,
ನೀರ ಸೇರಿ ಅದನು ಭಾರಿ ಕೆಡಿಸುತಿಹವು ಮೆಲ್ಲ ॥ 2 ॥
ಬೆಳೆಯ ರೋಗ ತಡೆಗೆ ಬೇಗ ಬಳಸುತಿರುವ ಮದ್ದು,
ಅನ್ನದಲ್ಲಿ ವಿಷವ ಚೆಲ್ಲಿ ಕೊಲುವುದುಂಟು ಖುದ್ದು ॥ 3 ॥
ನಾಡ ಬೆಳೆದು ಕಾಡು ಅಳಿದು ಹೋಗುತಿರಲು ಬೇಗ,
ಸೃಷ್ಟಿ ಸಮತೆ ತಪ್ಪಿ ಜನತೆ ಕಷ್ಟಪಡುವುದೀಗ ॥ 4 ॥
ಪರಿಸರವನು ರಕ್ಷಿಸುವನು ಲೋಕಕೆ ಉಪಕಾರಿ,
ಕೆಡಿಸುವವನು ಕೆಡುಕನಿಹನು ಜಗಕೆ ಅವನೆ ಮಾರಿ

**ಪ್ರಶ್ನೆಗಳು**

1) ಲೋಕಕ್ಕೆ ಉಪಕಾರಿ ಯಾರು ?

2) ಉಸಿರ ಗಾಳಿಯನ್ನು ಹಾಳು ಮಾಡುತ್ತಿರುವುದು ಯಾವುದು?

3) ಸೃಷ್ಟಿ ಸಮತೆ ತಪ್ಪಲು ಕಾರಣವೇನು ?

4) ಅನ್ನದಲ್ಲಿ ವಿಷವ ಚೆಲ್ಲವುದು ಯಾವುದು ?

11. ನಿಮ್ಮನ್ನು ವಿಜಯನಗರ ಜಿಲ್ಲೆಯ ಕೃಷ್ಣದೇವರಾಯ ಪ್ರೌಢಶಾಲೆಯಲ್ಲಿ 9ನೇ ತರಗತಿ ಓದುತ್ತಿರುವ ಮೋಹಿತ ಎಂದು ಭಾವಿಸಿಕೊಂಡು ವರ್ಗಾವಣೆ ಪತ್ರ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ. **4*1=4**